**OS No: 13 /2015** **PW: 2**

**ದಿಃ 22-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಸ್.ಬಿ.ಎಮ್. ವಕೀಲರಿಂದ (ಪ್ರತಿವಾದಿ ನಂಬರ 2 ಪರ)**

ನಾನು ರಜಿಯಾ ಬೇಗಂ ಇವರಿಗೆ ಮಾರಾಟ ಮಾಡಿರುವ ಎಂಟು ಎಕರೆ ಜಮೀನಿನ ಉತ್ತರ ಭಾಗಕ್ಕೆ ರಸ್ತೆ ಬರುತ್ತದೆ. ಖರೀದಿ ಪತ್ರದಲ್ಲಿ ಈ ಬಗ್ಗೆ ನಮೂದು ಮಾಡಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಮಾರಾಟ ಮಾಡಿರುವ ಜಮೀನಿನ ಉತ್ತರಕ್ಕೆ ದಾರಿಯ ನಂತರದಲ್ಲಿ ಹಳ್ಳ ಬರುತ್ತದೆ. ಕೊಂಚೂರು ಗ್ರಾಮದಲ್ಲಿ ಬಸವಣ್ಣನ ಗುಡಿ ಇದೆ ಎಂದರೆ ಸರಿ. ಗುಡಿ ಎದುರಿಗೆ ರಸ್ತೆ ಇದೆ. ಆ ರಸ್ತೆಯ ಮೂಲಕ ಹೋದರೆ ಮಲ್ಲಪ್ಪ ದಂಡಗುಂಡ ಇವರ ಜಮೀನು ಬರುತ್ತದೆ ಎಂದರೆ ಸರಿ. ಅದಾದ ನಂತರ ಕಾಂತಮ್ಮಗೊಳ ಇವರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮೇಲಿನ ಎಲ್ಲಾ ಜಮೀನುಗಳಿಗೆ ಹೋಗಲು ಗುಡಿಯ ಎದುರಿಗೆ ರಸ್ತೆ ಇದೆ ಎಂದರೆ ಸರಿ. ಶಬ್ಬೀರ ಪಟೇಲ ಇವರ ಜಮೀನಿಗೆ ಹೋಗಬೇಕಾದರೆ ನಾನು ಮಾರಾಟ ಮಾಡಿರುವ ರಜಿಯಾ ಬೇಗಂ ಅವರ ಜಮೀನಿನ ಮೂಲಕ ಹೋಗುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಶಬ್ಬೀರ ಪಟೇಲ ಇತನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಸಿ.ಎಸ್.ಪಿ. ವಕೀಲರಿಂದ (ಪ್ರತಿವಾದಿ ನಂಬರ 1 ಮತ್ತು 3 ಪರ)**

(ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ). ನನ್ನ ತಂದೆಯ ಹೆಸರು ಭೀಮರಾಯ ಅಡ್ಡ ಹೆಸರು ಹಲಕಟ್ಟಿ ಇರುತ್ತದೆ. ನನ್ನ ತಂದೆಗೆ ಒಬ್ಬ ಸಹೋದರ ಇರುತ್ತಾನೆ. ಆತನ ಹೆಸರು ಸಾಯಿಬಣ್ಣ. ನನ್ನ ಚಿಕ್ಕಪ್ಪ ಸಾಯಿಬಣ್ಣ ಇವರು ಖಾದರ ಪಟೇಲ ಅವರ ತಂದೆಗೆ ತಮ್ಮ ಜಮೀನನ್ನು ಮಾರಾಟ ಮಾಡಿದ್ದಾರೆ. ಸರ್ವೆ ನಂಬರ 48 ರಲ್ಲಿ ಸಾಯಿಬಣ್ಣ ಇವರಿಗೆ ಆರು ಎಕರೆ ಜಮೀನು ಮತ್ತು ನನ್ನ ತಂದೆ ಭಾಗಕ್ಕೆ ಎಂಟು ಎಕರೆ ಜಮೀನು ಬಂದಿತ್ತು. ಮೊದಲಿಗೆ ಒಟ್ಟು 14 ಎಕರೆ ಜಮೀನು ಒಂದೇ ಹಾಸಿಗೆಯಲ್ಲಿ ಇತ್ತು ಎಂದರೆ ಸರಿ. ಒಟ್ಟು 14 ಎಕರೆ ಜಮೀನಿನ ಚೆಕ್ ಬಂದಿ ಹೇಳಲು ಬರುತ್ತದೆ. ಉತ್ತರಕ್ಕೆ ಖಾದರ ಪಟೇಲ ಇವರ ಅಣ್ಣತಮ್ಮಂದಿರ ಪೈಕಿ ಯವರಿಗೆ ಸೇರಿದ ಜಮೀನು ಇದೆ. ಉಳಿದ ದಿಕ್ಕಿಗೆ ಕೂಡ ಧನಗುಂದ ಅವರ ಹೊಲ ಮತ್ತು ವಾದಿಗಳ ಸಂಬಂಧಿಕರ ಜಮೀನುಗಳು ಬರುತ್ತವೆ ನನಗೆ ಖಚಿತವಾಗಿ ಹೆಸರು ಹೇಳಲು ಬರುವುದಿಲ್ಲ. ನಾನು ಊರಿನಿಂದ ಹೊರಗೆ ಇದ್ದು ಅಂದಾಜು 20 ವರ್ಷ ಆಗಿರಬಹುದು. ಊರು ಬಿಟ್ಟ ನಂತರದಲ್ಲಿ ಊರಿನಲ್ಲಿ ಆದ ಬದಲಾವಣೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**-Sd-**
**ಪ್ರ.ದ.ನ್ಯಾ.ದಂ.ಗಳು, ಶಹಬಾದ**